**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾಯವರ ನ್ಯಾಯಾಲಯ, ಹುಣಸೂರು.**

**ಸಿ.ಸಿ.535/2019**

ಫಿರ್ಯಾದುದಾರರುಃ ಶ್ರೀ ಎಂ. ಕೆ. ನಾಗರಾಜು ಬಿನ್ ಕೃಷ್ಣಬೋವಿ,
37 ವರ್ಷ,
ವಾಸಃ ಮೂಕನಹಳ್ಳಿ ಗ್ರಾಮ,
ಕಸಬಾ ಹೋಬಳಿ, ಹುಣಸೂರು ತಾಲ್ಲೂಕು,
ಮೈಸೂರು ಜಿಲ್ಲೆ.

ವಿರುದ್ಧ

ಆರೋಪಿಃ ಶ್ರೀ ಸುರೇಶ್ ಬಿ ಬಿನ್ ಲೇಟ್ ಭದ್ರಯ್ಯ,
37 ವರ್ಷ,
ವಾಸಃ ನಂ.392,
ಸದಾಶಿವನಕೊಪ್ಪಲು, ಹುಣಸೂರು ಸಿಟಿ,
ಹುಣಸೂರು.

**ಕ್ರಿಮಿನಲ್ ಪ್ರಕ್ರಿಯೆ ಸಂಹಿತೆ ಕಲಂ 313 ರ ಅಡಿ ಆರೋಪಿಯ ಹೇಳಿಕೆ**

1. ಈ ಕೇಸಿನಲ್ಲಿ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದ ಸಾಕ್ಷಿಯ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರಃ

2. ಫ್ರಾಸಾ2–ಶ್ರೀ ಎಂ. ಕೆ. ನಾಗರಾಜುರವರು ತಮ್ಮ ಸಾಕ್ಷ್ಯದಲ್ಲಿ, ಆರೋಪಿಯಾದ ನೀವು, ಫಿಯಾದುರ್ದಾರರಿಂದ ನಿಮ್ಮ ಕಾನೂನುಬದ್ಧ ಅವಶ್ಯಕತೆಗಾಗಿ ರೂ.2,00,000/– ಹಣವನ್ನು ಸಾಲವಾಗಿ ಪಡೆದು, ಸದರಿ ಸಾಲದ ಹಣವನ್ನು ಮರುಪಾವತಿಸಲು 18.07.2019 ದಿನಾಂಕ ಇರುವ ಬೆಂಗಳೂರಿನ ಕೊರಮಂಗಲ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಚೆಕ್ ಸಂಖ್ಯೆ 690604 ರೂ.2,00,000/–ಗಳ ಚೆಕ್ಕನ್ನು ನೀಡಿದ್ದು, ಫಿಯಾದುರ್ದಾರರು ಹುಣಸೂರು ಶಾಖೆಯ ವಿಜಯ ಬ್ಯಾಂಕಿಗೆ ಹಾಜರುಪಡಿಸಿದಾಗ, "Exceeds Arrangements" ಎಂಬ ಹಿಂಬರಹದೊಂದಿಗೆ ಚೆಕ್ ಮಾನ್ಯವಾಗದೆ ವಾಪಸ್ಸಾಗಿರುತ್ತದೆ ಎಂದು ಫ್ರಾಸಾ1 ರವರು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

3. ಫ್ರಾಸಾ.2 ರವರು ಮುಂದುವರೆದು ತಮ್ಮ ಪ್ರಮಾಣಪತ್ರ / ಸಾಕ್ಷ್ಯದಲ್ಲಿ, ಸದರಿ ವಿಷಯದ ಬಗ್ಗೆ ಅವರು ನೋಂದಾಯಿತ ಅಂಚೆಯ ಮೂಲಕ ದಿನಾಂಕ 23.07.2019 ರಂದು ನೋಟೀಸನ್ನು ಕಳುಹಿಸಿದ್ದು, ಸದರಿ ನೋಟೀಸು ಜಾರಿಯಾಗಿದ್ದರು ಸಹ ನೋಟೀಸ್‌ಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಮತ್ತು ಹಣವನ್ನು ಹಿಂದಿರುಗಿಸಿರುವುದಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

4. ಫ್ರಾಸಾ1 ರವರು ತಮ್ಮ ಪ್ರಮಾಣಪತ್ರ / ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಸಹ ಅವರಿಗೆ ಮೋಸ ಮಾಡುವ ಉದ್ದೇಶದಿಂದ, ಚೆಕ್ಕನ್ನು ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉತ್ತರ –

5. ನಿಮ್ಮ ಪರ ಸಾಕ್ಷಿಗಳಿವೆಯೇ?

ಉತ್ತರಃ

6. ನೀವು ಹೆಚ್ಚಿಗೆ ಹೇಳುವುದು ಏನಾದರೂ ಇದೆಯೇ?

ಉತ್ತರಃ

ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕಃ 11-07-2023

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾಗೂ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹುಣಸೂರು.